# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ:KPTCL/KCO-129/31518/2020-21/2271
ಲಗತ್ತು:

ನಿಗಮ ಕಾರ್ಯಾಲಯ
ಕ.ವಿ.ಪ್ರ.ನಿ.ನಿ ಕಾವೇರಿ ಭವನ
ಬೆಂಗಳೂರು-560009

23 JUL 2021

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ) ನಿಯಂತ್ರಣಾಧಿಕಾರಿಗಳು,
   ಕವಿಪ್ರನಿನಿ, ಪ್ರಸರಣ ವಲಯ/ಎಸ್‌ಎಲ್‌ಡಿಸಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ಉಪ ನಿಯಂತ್ರಣಾಧಿಕಾರಿಗಳು,
   ಕಾಮಗಾರಿ ಮತ್ತು ನಿರ್ವಹಣೆ ವೃತ್ತ, ಕವಿಪ್ರನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಲೆಕ್ಕಾಧಿಕಾರಿಗಳು,
   ಬೃಹತ್ ಕಾಮಗಾರಿ/ಪ್ರಸರಣ ಮಾರ್ಗ ಮತ್ತು ಉಪಕೇಂದ್ರಗಳ ವಿಭಾಗ, ಕವಿಪ್ರನಿನಿ.

ಮಾನ್ಯರೆ,

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಪ್ರತಿ ತಿಂಗಳ ಪಿಂಚಣಿ ವಂತಿಗೆಯನ್ನು ಆಯಾ ಮಾಸದ ವೇತನ ಬಟವಾಡೆ ದಿನಾಂಕದ ಒಳಗಾಗಿ ಅಥವಾ ವೇತನ ಬಟವಾಡೆ ದಿನಾಂಕದಂದೇ ತಂತ್ರಾಂಶದಲ್ಲಿ ವಂತಿಗೆಯನ್ನು ಅನುಮೋದಿಸುವ ಕುರಿತು.

ಉಲ್ಲೇಖ: 1. ನಿಗಮದ ಆದೇಶದ ಸಂಖ್ಯೆ: ಕವಿಪ್ರನಿನಿ/ಬಿ93/35989/2018-19/ಸಿವೈಎಸ್-16 ಬೆಂಗಳೂರು ದಿನಾಂಕ: 02.11.2018.
2. ಕೆಇಎನ್‌ಡಿಸಿಪಿಎಸ್/ಬಿ93/360003/2018-19/1131-38 ದಿನಾಂಕ: 30.11.2018.
3. ಈ ಕಚೇರಿ ಪತ್ರ ಸಂಖ್ಯೆ: ಕವಿಪ್ರನಿನಿ/ಕೆಸಿಓ-129/102028/2018-19 ದಿನಾಂಕ: 07.12.2018.

ಲೆಕ್ಕ (ಸಿಬ್ಬಂ-1) B.S. 23/7/21

******

ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿಯಲ್ಲಿ ಉದ್ಯೋಗಿಗಳ ವಂತಿಗೆ ಹಾಗೂ ಉದ್ಯೋಗಸ್ಥರ ವಂತಿಗೆಯ ವಿವರಗಳನ್ನು ಪ್ರತಿ ತಿಂಗಳು 25ನೇ ತಾರೀಖಿನಂದೇ ದಾಖಲಿಸಲು ಹಾಗೂ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳು ವೇತನ ಬಟವಾಡೆ ದಿನಾಂಕದ ಒಳಗಾಗಿ ಅಥವಾ ವೇತನ ಬಟವಾಡೆ ದಿನಾಂಕದಂದೇ ಖಡ್ಡಾಯವಾಗಿ ತಂತ್ರಾಂಶದಲ್ಲಿ ಅನುಮೋದನೆ ನೀಡಲು ಉಲ್ಲೇಖ-3 ರಲ್ಲಿ ಸೂಚಿಸಲಾಗಿದ್ದರೂ, ಕೆಲವೊಂದು ಕವಿಪ್ರನಿನಿಯ ಲೆಕ್ಕಘಟಕಗಳು ಅನುಮೋದನೆಯನ್ನು ವಿಳಂಬವಾಗಿ ದಾಖಲಿಸುತ್ತಿರುವುದು ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ವಿಳಂಬವಾಗಿ ಪಿಂಚಣಿ ವಂತಿಗೆಯನ್ನು ಪಾವತಿಸಲಾಗಿರುತ್ತದೆ. ಉಲ್ಲೇಖ-1ರ ನಿಗಮದ ಆದೇಶದ ಪ್ರಕಾರ ವಿಳಂಬವಾಗಿ ವಂತಿಗೆ ಪಾವತಿಸಿದರೆ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳು ಬಡ್ಡಿ ಸೇರಿಸಿ ಪಾವತಿಸಲು ಸೂಚಿಸಲಾಗಿರುತ್ತದೆ.

ಆದ್ದರಿಂದ, ಪಿಂಚಣಿ ವಂತಿಗೆ ಹಣಕ್ಕೆ ಬಡ್ಡಿಗಳಿಕೆ ನಷ್ಟವನ್ನು ತಡೆಗಟ್ಟಲು ಎನ್‌ಡಿಸಿಪಿಎಸ್ ತಂತ್ರಾಂಶದಲ್ಲಿ ಕವಿಪ್ರನಿನಿಯ ಎಲ್ಲಾ ಲೆಕ್ಕ ಘಟಕಗಳು ಅಧಿಕಾರಿ/ನೌಕರವಾರು ಉದ್ಯೋಗಿಗಳ ವಂತಿಗೆ ಹಾಗೂ ಉದ್ಯೋಗಸ್ಥರ ವಂತಿಗೆ ವಿವರಗಳನ್ನು. ತಂತ್ರಾಂಶದಲ್ಲಿ ಪ್ರತಿ ತಿಂಗಳು ವೇತನ ಬಟವಾಡೆ ದಿನಾಂಕದ ಒಳಗಾಗಿ ಅಥವಾ ವೇತನ ಬಟವಾಡೆ ದಿನಾಂಕದಂದೇ ಖಡ್ಡಾಯವಾಗಿ ಅನುಮೋದನೆ ನೀಡುವಂತೆ ಸೂಚಿಸಲಾಗಿದೆ. ತಪ್ಪಿದ್ದಲ್ಲಿ, ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳೇ ವಿಳಂಬ ವಂತಿಗೆ ಬಡ್ಡಿಯನ್ನು ಪಾವತಿಸಲು ನೇರ ಹೊಣೆಗಾರರಾಗಿರುತ್ತಾರೆ ಎಂಬ ಅಂಶವನ್ನು ಪುನರುಚ್ಚರಿಸಲಾಗಿದೆ.

ತಮ್ಮ ವಿಶ್ವಾಸಿ

ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಪ್ರತಿಗಳು
1. ಅಧೀಕ್ಷಕ ಇಂಜಿನಿಯರ್ (ವಿ) IT & MIS ಕವಿಪ್ರನಿನಿ ರವರ ಮಾಹಿತಿಗಾಗಿ ಹಾಗೂ ಪ್ರಕಟಣೆಗಾಗಿ.
2. ಮುಖ್ಯ ಕಡತ.